
ಈ ದೇವರುಗಳಿಗೆ ಗಣಿತ ಗೊತ್ತಿಲ್ಲ. ವಿಜ್ಞಾನ ಗೊತ್ತಿಲ್ಲ. ಹಾಗಾದರೆ ಇನ್ನೇನು ಗೊತ್ತು?

## ಓಡುವ ದೇವತೆ

ಬೆಂಗಳೂರು ಜಿಲ್ಲೆಯ ಒಂದು ಹಳ್ಳಿಯಲ್ಲಿ ಹೆಣ್ಣುದೇವತೆಯ ಹಬ್ಬ ಆಗುತ್ತಿತ್ತು. ದೇವತೆಯ ಹೆಸರು ಮಾರಮ್ಮ. ಆರತಿ ಹೊತ್ತ ತರುಣಿಯರ ಮೆರವಣಿಗೆ. ಅಲ್ಲಿ ನಾವು ಗಮನಿಸಬೇಕಾದ್ದು ಮಾರಮ್ಮ ಮೈಮೇಲೆ ಬಂದ ಪ್ರಸಂಗ. ಒಬ್ಬ ವ್ಯಕ್ತಿ ಗುಂಪಿನಲ್ಲಿ ಇದ್ದವನು ಕಿರ್ರ್–ಕಿಟಾರ್... ಎಂದು ಜೋರಾಗಿ ಕಿರುಚಿ ಎಲ್ಲರ ಗಮನವನ್ನೂ ಸೆಳೆದನು. ಇದು ಸಾಮಾನ್ಯವಾಗಿ ಎಲ್ಲ ದೇವರುಗಳ ತಂತ್ರ. ಭಕ್ತರೆಲ್ಲ ಗಾಬರಿ ಮತ್ತು ಹೆಚ್ಚಿನ ಭಕ್ತಿಯಿಂದ ಕೂಗಿದ ವ್ಯಕ್ತಿಯ ರಟ್ಟೆಗಳನ್ನು ಬಿಗಿಯಾಗಿ ಹಿಡಿದುಕೊಂಡರು. ವ್ಯಕ್ತಿ ಮತ್ತೊಮ್ಮೆ ಕಿರ್ರ್... ಕಿಟಾರ್... ಎಂದು ಗರ್ಜಿಸಿದ. ತನ್ನನ್ನು ತಾನು ಪರಿಚಯ ಮಾಡಿಕೊಂಡ. ಈಗ ತಮ್ಮ ಮುಂದೆ ಕಾಣಿಸಿಕೊಂಡಿರುವುದು ಮಾರಮ್ಮ ಎಂದು ಮನವರಿಕೆ ಆದ ಕೂಡಲೇ ಅನೇಕ ಜನ ಭಾವಾವೇಶಕ್ಕೆ ತುತ್ತಾದರು. ಊರ ಮುಖ್ಯಸ್ಥನನ್ನು ಮುಂದಕ್ಕೆ ಬಿಡಲಾಯಿತು. ಬಂದವನು ಮುಖಂಡನಾದರೂ ದೈಹಿಕವಾಗಿ ದುರ್ಬಲನಾದ ವೃದ್ಧ. ಅವನು ತನ್ನ ಶಕ್ತಿಯನ್ನೆಲ್ಲಾ ಕ್ರೋಡೀಕರಿಸಿ ಸಹಜವಾದ ಆತ್ಮೀಯತೆಯನ್ನು ನಟಿಸುವವನಂತೆ 'ಏನಮ್ಮಾ, ನಿನಗೆ ಏನ್ ಕಡಿಮೆ ಮಾಡಿದ್ದೀವಿ?' ಎಂದನು.


ಕಲೆ: ಕೃಷ್ಣ ಎಸ್ ಹೂಗಾರ್

ಮಾರಮ್ಮ: ನನ್ನನ್ನು ಇಷ್ಟು ದಿನಾ ಯಾಕ್ ಮರ್‌ತಿದ್ರ?

ಮುದುಕ: ಅವರೆಲ್ಲ ಸೂಳೇಮಕ್ಳು. ಅವರ ಕಿತಾಪತಿಯಿಂದ ತಾನೇ ಹಬ್ಬ ತಡಾ ಆಗಿತ್ತು.

ಮಾರಮ್ಮ: ಅದನ್ನೇ ನಾನೂ ಕೇಳ್ತಾ ಇರೋದು.

ಮುದುಕ: ನೀನ್ ಸತ್‌ವಂತೆ ಆದ್ರೆ ಅವರಿಗೆ ಏನಾದರೂ ತೋರ್ಸು.

ಮಾರಮ್ಮ: ಅವರನ್ನು ಹಂಗೇ ಬುಡಲ್ಲಾ... ಅವರನ್ನು ಹಂಗೇ ಬುಡಲ್ಲ.

ಹೀಗೆ ಹೇಳುತ್ತಾ, ಕುಣಿಯುತ್ತ ಉತ್ಸಾಹದಿಂದ ಇದ್ದ ದೇವತೆಯನ್ನು ಒಬ್ಬ ಯುವಕ ಒಂದು ಪ್ರಶ್ನೆ ಕೇಳಿದ. 'ನಮ್ಮ ಜನಗಳಿಗೆಲ್ಲ ಬಡತನ ಹೋಗಬೇಕಾದ್ರೆ ಏನ್ ಮಾಡಬೇಕು, ನೀನು ಇದನ್ನ ಯಂಗ ಹೋಗುಸ್ತೀಯಾ?' ಈ ಪ್ರಶ್ನೆ ಕೇಳಿಸಿಕೊಂಡ ದೇವತೆಗೆ ಉತ್ಸಾಹ ಭಂಗವಾಯಿತು. ದೇವತೆ ಕಿವುಡಿಯಂತೆ ಅತ್ತ ತಿರುಗಿತು. ಜನರಿಗೂ ಈ ಪ್ರಶ್ನೆ ಭಯವನ್ನು ಉಂಟುಮಾಡಿತು. ಕುಣಿಯುತ್ತಿದ್ದ ದೇವತೆ ಓಡಲು ಶುರುಮಾಡಿತು. ಊರ ಹೊರಗಿನ ಒಂದು ಮರದ ಕಡೆಗೆ ಇದು ಓಡತೊಡಗಿದಾಗ ಭಕ್ತಾದಿಗಳೂ ಹಿಂದೆ ಓಡತೊಡಗಿದರು. ದೇವತೆಯ ವೇಗ ಹೆಚ್ಚಾಗಿತ್ತು. ಭಕ್ತರೂ ಎದ್ದು ಬಿದ್ದು ಹಿಂಬಾಲಿಸುತ್ತಿದ್ದರು. ಹೀಗೆ ಓಡುವುದು ಆ ದೇವತೆಗೆ ಸಂಬಂಧಿಸಿದ ಒಂದು ಆಚರಣೆ. ಇದು ಗೊತ್ತಿಲ್ಲದವನಿಗೆ ಊರ ಜನವೆಲ್ಲ ಕಳ್ಳನೊಬ್ಬನನ್ನು ಹಿಡಿಯಲು ಓಡಿಸಿಕೊಂಡು ಹೋಗುತ್ತಿರುವಂತೆ ಭಾಸವಾಗುತ್ತಿತ್ತು. ಗುಡಿಯ ಮುಂದೆಯೇ ನಿಂತಿದ್ದ ನನಗೆ ದೇವತೆ–ಜನ ಯಾರೂ ಊರಿಗೆ ವಾಪಸ್ ಬರುವುದಿಲ್ಲವೇನೋ ಎನ್ನಿಸಿತು. ಆದರೆ ಕೆಲವೇ ಗಳಿಗೆಯ ನಂತರ ತೊರೆಯನ್ನು ದಾಟಿಕೊಂಡು ಇನ್ನೊಂದು ದಾರಿಯಿಂದ ಅವರೆಲ್ಲ ಊರನ್ನು ಪ್ರವೇಶಿಸುತ್ತಿದ್ದರು. ದೇವತೆ ಮುಂದೆ ಕುಣಿಯುತ್ತ ಬರುತ್ತಿತ್ತು. ಆಯಾಸಗೊಂಡಿತ್ತು. ಜನರು ಸ್ವಲ್ಪ ಹಿಂದೆ ಬಂದರು. ಅವರೂ ಆಯಾಸಗೊಂಡಿದ್ದರು.

ಸಿದ್ಧಲಿಂಗಯ್ಯನವರ 'ಅವತಾರಗಳು' ಕೃತಿಯ ಒಂದು ಭಾಗ